# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.
# ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.ಃ 611/13**

ಸಿ.ಡಬ್ಲ್ಯು. 9

ಪಿ.ಡಬ್ಲ್ಯು. 8

| | | |
|---|---|---|
| ಸಾಕ್ಷಿದಾರರ ಹೆಸರು | : | ವಿದ್ಯಾಧರ ಗಾವಡಿ |
| ತಂದೆಯ/ಗಂಡನ ಹೆಸರು | : | ನಾಗಪ್ಪ ಗಾವಡಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಖಾಸಗಿ |
| ವಾಸ್ತವ್ಯ | : | ಕಿಮಾನಿ, ಕುಮಟಾ ತಾಲೂಕ |

(ಇಂದು ದಿನಾಂಕಃ **19-03-2019** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

## ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.1 ನನ್ನ ಅಕ್ಕ. ಚಾ.ಸಾ.10 ನನ್ನ ತಂಗಿ. ಸನ್ 2011 ನೇ ಇಸವಿಯಲ್ಲಿ ಆರೋಪಿ ನಂ.1 ನಾಗವೇಣಿ ನಮ್ಮ ಮನೆಯ ಬಳಿ ಬಂದು ಚಾ.ಸಾ. 10 ರವಳಿಗೆ ಬ್ಯಾಂಕ್‌ನಲ್ಲಿ ನೌಕರಿ ತೆಗೆಸಿಕೊಡುವುದಾಗಿ ಮತ್ತು ಅದಕ್ಕಾಗಿ ರೂ. 3,50,000-00 ನೀಡಬೇಕು ಎಂದು ಕೇಳಿದಳು. ಅದೇ ದಿನ ನಾನು ಕೆ.ವಿ.ಜಿ. ಬ್ಯಾಂಕ್‌ನ ಚಕ್‌ನ್ನು ರೂ. 25,000-00 ಗಳಿಗೆ 1ನೇ ಆರೋಪಿತೆಯ ಬಳಿ ನೀಡಿರುತ್ತೇನೆ. ಆಶ್ವಾಸನೆಯಂತೆ 1ನೇ ಆರೋಪಿತೆ ಚಾ.ಸಾ.10 ರವಳಿಗೆ ನೌಕರಿ ತೆಗೆಸಿಕೊಟ್ಟಿರುವುದಿಲ್ಲ, ನಾನು ನೀಡಿದ ಚಕ್‌ನ ಮೊತ್ತವನ್ನು ಕೂಡ ವಾಪಸ್ ಮರಳಿಸಿರುವುದಿಲ್ಲ, ಸದ್ರಿ 1ನೇ ಆರೋಪಿತೆಯನ್ನು ಸಾಕ್ಷಿದಾರರು ನ್ಯಾ.ದ ಸಮಕ್ಷಮ ನೋಡಿ ಗುರುತಿಸಿರುತ್ತಾರೆ. ನಾನು ಆಕೆಗೆ ನೀಡಿದ ನಿ.ಪಿ.5 ಚಕ್‌ನ್ನು ನೋಡಿ ಗುರುತಿಸುತ್ತೇನೆ. ಸದ್ರಿ

ದಾಖಲಾತಿಯಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ಸದ್ರಿ ಚೆಕ್‌ನ ಹಿಂಬದಿ 1ನೇ ಆರೋಪಿತೆ ಸಹಿಯನ್ನು ಮಾಡಿರುತ್ತಾಳೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ;-**

**1.** ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. 1ನೇ ಆರೋಪಿತೆ ಯಾವ ದಿನಾಂಕ ಮತ್ತು ತಿಂಗಳಿನಲ್ಲಿ ನೌಕರಿ ಕೊಡಿಸುವುದಾಗಿ ತಿಳಿಸಿದ್ದಳು ಎಂದು ಹೇಳಲು ಬರುವುದಿಲ್ಲ. ಚಾ.ಸಾ.1 ಯಾವ ದಿನಾಂಕ, ತಿಂಗಳು, ಇಸವಿಯಲ್ಲಿ ಪೊಲೀಸರಿಗೆ ದೂರು ಸಲ್ಲಿಸಿದ್ದಾಳೆ ಎಂದು ನನಗೆ ಗೊತ್ತಿಲ್ಲ. ನನ್ನ ಮನೆ ಕುಮಟಾ ಪಟ್ಟಣದಿಂದ 18 ಕಿ.ಮೀ. ದೂರದಲ್ಲಿದೆ. 1ನೇ ಆರೋಪಿತೆ ನಡೆದುಕೊಂಡು ಯಾ ವಾಹನದಲ್ಲಿ ನನ್ನ ಮನೆಯ ಬಳಿ ಬಂದಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ನಿ.ಪಿ.5 ಚೆಕ್‌ನ್ನು 1ನೇ ಆರೋಪಿತೆಗೆ ನೀಡಿದ ಸಮಯ ಆಸುಪಾಸಿನಲ್ಲಿ ಬೇರೆ ಯಾರೂ ಜನರು ಇರಲಿಲ್ಲ. ನಿ.ಪಿ.5 ಚೆಕ್ ಯಾವ ಚೆಕ್ ಪುಸ್ತಕಕ್ಕೆ ಸಂಬಂಧಿಸಿದ್ದು ಮತ್ತು ಅದರ ಕ್ರಮ ಸಂಖ್ಯೆಗಳು ನನಗೆ ಗೊತ್ತಿಲ್ಲ.

**2.** ನಾನು ಪಿ.ಆರ್.ನಾಯ್ಕ ಇವರ ಕಂಪನಿಯಲ್ಲಿ ಗುತ್ತಿಗೆದಾರನಾಗಿ ಸುಮಾರು 18 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಈ ಪ್ರಕರಣದ ಘಟನೆಯ ಸಮಯ ವರಮಾನ ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ನಾನು 2011 ರ ಪೂರ್ವದಲ್ಲಿ ಯಾವುದೇ ಚೆಕ್‌ನ ವ್ಯವಹಾರ ನಡೆಸಿರುವುದಿಲ್ಲ.

**3.** ಚಾ.ಸಾ. 10 ರವರಿಗೆ ಬ್ಯಾಂಕ್‌ನಲ್ಲಿ ನೌಕರಿ ಕೊಡಿಸುವ ಬಗ್ಗೆ ಸದ್ರಿ ಸಮಯ ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಿತ್ತು. ಸದ್ರಿ ಸಮಯ ಯಾವ ಬ್ಯಾಂಕ್‌ನವರು ಯಾವಾಗ ಬ್ಯಾಂಕ್ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕರೆದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಬ್ಯಾಂಕ್‌ನ ನೌಕರಿ ಹಣ ಕೊಟ್ಟು ಪಡೆಯಲು ಸಾಧ್ಯವಿಲ್ಲ ಎಂದರೆ ಸರಿ. ನಾನು ನಿ.ಪಿ.5 ಚೆಕ್‌ನ್ನು ಕ್ರಾಸ್ ಮಾಡಿ ನೀಡಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಿ.ಪಿ.5 ರಲ್ಲಿನ ಬರವಣಿಗೆ ನನ್ನ ಹಸ್ತಾಕ್ಷರದಲ್ಲಿದೆ. ನಿ.ಪಿ.5 ಚೆಕ್‌ನ ಮೊತ್ತ ನನ್ನ ಖಾತೆಯಿಂದ ಬಟವಡೆ

ಆಗಿರುತ್ತದೆ. ಈ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಒದಗಿಸಲು ತೊಂದರೆ ಇರಲಿಲ್ಲ. ನಿ.ಪಿ.5 ಚೆಕ್‌ನ್ನು ನೀಡುವ ಪೂರ್ವದಲ್ಲಿ ಬ್ಯಾಂಕ್ ನೌಕರಿ ಪ್ರಕಟಣೆಯ ಬಗ್ಗೆ ನಾನು ಚಾ.ಸಾ.1 ಮತ್ತು 10 ರವರ ಬಳಿ ಕೇಳಿರುವುದಿಲ್ಲ. ಯಾವ ದಿನಾಂಕದಂದು ಬ್ಯಾಂಕ್ ನೌಕರಿಯ ಬಗ್ಗೆ ಚಾ.ಸಾ. 10 ನನಗೆ ತಿಳಿಸಿರುತ್ತಾಳೆ ಎಂದು ನೆನಪಿಲ್ಲ. ನಿ.ಪಿ.5 ಚೆಕ್‌ನ್ನು ನೀಡುವ ಪೂರ್ವದಲ್ಲಿ ನನಗೆ 1ನೇ ಆರೋಪಿತೆಯ ಪರಿಚಯ ಇರಲಿಲ್ಲ. ನನ್ನ ಅಕ್ಕ ಚಾ.ಸಾ.1 ರವಳಿಗೆ ಪರಿಚಯ ಇತ್ತು. ನಿ.ಪಿ.5 ನ್ನು ಹೊರತುಪಡಿಸಿ, ನನಗೆ ಆರೋಪಿತರ ಇತರ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ.

4. ನಿ.ಪಿ. 5 ಚೆಕ್‌ನ್ನು ನೀಡುವ ಸಮಯ ನಾನು ರಜೆಯ ಮೇಲೆ ಮನೆಗೆ ಬಂದಿದ್ದೆನು. ಸದ್ರಿ ರಜಾ ಸಂಬಂಧಿತ ದಾಖಲೆಯನ್ನು ಪೊಲೀಸರಿಗೆ ನೀಡಲು ನನಗೆ ತೊಂದರೆ ಇರಲಿಲ್ಲ. ನಾನು ಹೇಳುವಂತೆ 1ನೇ ಆರೋಪಿತೆ ಯಾವತ್ತೂ ನನ್ನ ಮನೆಗೆ ಭೇಟಿ ಕೊಟ್ಟಿಲ್ಲ, ನೌಕರಿ ಕೊಡಿಸುವುದಾಗಿ ಭರವಸೆ ನೀಡಿ ನಿ.ಪಿ. 5 ಚೆಕ್‌ನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರು ನೀಡಿದ ಸುಳ್ಳು ದೂರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.5 ರ ಹಿಂಭಾಗ 1ನೇ ಆರೋಪಿತೆಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ.